

بسم اللهِ الرّحمٰن الرّحيم

# ಹಝ್ರತ್ ಉಮರ್(ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **23–07–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ- بِسْمِ اللهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. اِيَّاكَ نَعْبُدُ وَاِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇತ್ತೀಚಿಗೆ ನಾವು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಸುತ್ತಿದ್ದೇವೆ. ಅವರ ಕಾಲದ ಕೆಲವು ಯುದ್ಧಗಳ ಪ್ರಸ್ತಾಪ ನಡೆಯುತ್ತಿತ್ತು. ಹಿಜರಿ 13 ಅಥವಾ 16ರಲ್ಲಿ ನಡೆದ ಬವೇಬ್ ಯುದ್ಧದ ವಿವರಣೆ ಚರಿತ್ರೆಯಲ್ಲಿ ಹೀಗೆ ಲಭಿಸುತ್ತದೆ: ಜಿಸರ್ ಯುದ್ಧದ ಸೋಲಿನಿಂದ ಹಝ್ರತ್ ಉಮರ್‌ರಿಗೆ ತುಂಬ ದುಃಖವುಂಟಾಯಿತು. ಹೀಗೆ ಅವರು ಅರೇಬಿಯದೆಲ್ಲಡೆ ಭಾಷಣಗಾರರರನ್ನು ಕಳುಹಿಸಿ ಅರಬ್ ಗೋತ್ರಗಳನ್ನು ಈ ಸಾಮುದಾಯಿಕ ಯುದ್ಧಕ್ಕಾಗಿ ತಯಾರುಮಾಡಿದರು. ಈ ಸೈನ್ಯದಲ್ಲಿ ಮುಸ್ಲಿಮರಲ್ಲದೆ ಕ್ರೈಸ್ತ ಗೋತ್ರಗಳು ಕೂಡ ಭಾಗಿಯಾಗಿದ್ದುವು. ಮತ್ತೊಂದೆಡೆ ಹಝ್ರತ್ ಮುಸನ್ನ ಸಹ ಇರಾಕಿನ ಗಡಿ ಪ್ರದೇಶಗಳಿಂದ ಸೈನ್ಯವನ್ನು ಒಟ್ಟುಗೂಡಿಸಿದ್ದರು. ಮುಸ್ಲಿಮರ ತಯಾರಿಯ ಮಾಹಿತಿ ರುಸ್ತಮಿಗೆ ಲಭಿಸಿದಾಗ ಅವನು ಮೆಹ್‌ರಾನಿನ ನೇತೃತ್ವದಲ್ಲಿ ಒಂದು ಸೈನ್ಯವನ್ನು ರವಾನೆ ಮಾಡಿದನು. ಈ ಯುದ್ಧ ರಮಝಾನ್ ತಿಂಗಳಲ್ಲಿ ನಡೆಯಿತು. ಹಝ್ರತ್ ಮುಸನ್ನ ಸೈನ್ಯವನ್ನು ಕ್ರಮಪಡಿಸಿದರು ಮತ್ತು ಪಂಕ್ತಿಬದ್ಧಗೊಳಿಸಿದರು ಹಾಗೂ ಮುಸ್ಲಿಂ ಯೋಧರುಗಳನ್ನು ಸಂಬೋಧಿಸಿ ಭಾಷಣ ಮಾಡಿ ಅವರಿಗೆ ಧೈರ್ಯಕೊಟ್ಟರು. ಯುದ್ಧ ಶುರುವಾಯಿತು. ಶಕ್ತವಾದ ಹೋರಾಟದ ನಂತರ ಇರಾನಿಯರಲ್ಲಿ ಗಲಿಬಿಲಿಯುಂಟಾಯಿತು. ಈ ಯುದ್ಧದಲ್ಲಿ ಇರಾನಿನ ಸೇನಾಧಿಪತಿಯಾದ ಮೆಹ್‌ರಾನ್ ಸಮೇತ ಒಂದು ಲಕ್ಷ ಇರಾನಿಯರು ಕೊಲ್ಲಲ್ಪಟ್ಟರು. ಇರಾನಿ ಸೈನ್ಯ ಸೋತು ಓಡಿಹೋದಾಗ ಹಝ್ರತ್ ಮುಸನ್ನ ಅವರನ್ನು ಹಿಂಬಾಲಿಸಿದರು ಮತ್ತು ಅನೇಕ ಇರಾನಿ ಸಿಪಾಯಿಗಳನ್ನು ಕೊಂದುಹಾಕಿದರು. ಸೋತುಹೋದ ಜನರನ್ನು ಹಿಂಬಾಲಿಸಿದ ಈ ಕೃತ್ಯಕ್ಕಾಗಿ ಹಝ್ರತ್ ಮುಸನ್ನ ಅನಂತರ ಖೇದಿಸುತ್ತಿದ್ದರು. ಈ ಯುದ್ಧದ ಪರಿಣಾಮವಾಗಿ ಇರಾಕಿನ ಹೆಚ್ಚಿನ ಪ್ರದೇಶಗಳಲ್ಲಿ ಮುಸ್ಲಿಮರ ಪಾದಗಳು ಸುದೃಢಗೊಂಡುವು.

ಈ ಯುದ್ಧದಲ್ಲಿ ಮುಸ್ಲಿಂ ಮಹಿಳೆಯರ ಧೈರ್ಯ ಮತ್ತು ಸ್ಥೈರ್ಯದ ಉದಾಹರಣೆ ಸಹ ಕಾಣಬಹುದಾಗಿತ್ತು. ಯುದ್ಧದ ನಂತರ ಮುಸ್ಲಿಮ್ ಸೈನ್ಯದ ಒಂದು ತುಕಡಿ ಕುದುರೆಗಳನ್ನು ಓಡಿಸುತ್ತಾ ಹೆಂಗಸರ ಮತ್ತು ಮಕ್ಕಳ ಕ್ಯಾಂಪಿನ ಬಳಿ ಬಂದಾಗ, ಅದು ಅವರ ಮೇಲೆ ಆಕ್ರಮಣ ನಡೆಸಲು ಬರುತ್ತಿರುವ ಶತ್ರುಗಳ ಸೈನ್ಯವೆಂದು ಭಾವಿಸಿಕೊಂಡು ಆ ಮಹಿಳೆಯರು ಮಕ್ಕಳನ್ನು ಎತ್ತಿಕೊಂಡು ಸ್ವತಃ ಕಲ್ಲುಗಳನ್ನು ಮತ್ತು ಕೋಲುಗಳನ್ನು ತೆಗೆದುಕೊಂಡು ಹೋರಾಟಕ್ಕಾಗಿ ತಯಾರಾದರು. ಸೈನ್ಯದ ತುಕಡಿ ಸಮೀಪವಾದಾಗ, ಅವರು ಮುಸ್ಲಿಮರು ಎಂದು ಅವರಿಗೆ ಗೊತ್ತಾಯಿತು. ಹೀಗೆ ಆ ಸಂಘದ ಮುಖಂಡನಾದ ಅಮ್ರ್ ಬಿನ್ ಅಬ್ದುಲ್ ಮಸೀಹ್ ಒಡನೆ ಹೀಗೆ ಹೇಳಿದರು: ಅಲ್ಲಾಹು ಅಕ್ಬರ್. ಸೈನ್ಯದ ಮಹಿಳೆಯರಿಗೆ ಇದೇ ಚೆಲುವು.

ಹಿಜರೀ 14ರಲ್ಲಿ ಮುಸ್ಲಿಮರು ಮತ್ತು ಇರಾನಿಯರ ನಡುವೆ ನಿರ್ಣಾಯಕ ಯುದ್ಧವಾದ ಖಾದಿಸಿಯ ಸಮರ ನಡೆಯಿತು. ಅದರ ಪರಿಣಾಮವಾಗಿ ಇರಾನಿನ ಆಡಳಿತ ಮುಸ್ಲಿಮರ ವಶದಲ್ಲಿ ಬಂತು. ಮುಸ್ಲಿಮರ ವಿಜಯಗಳ ಬಗ್ಗೆ ಇರಾನಿನ ಜನರಿಗೆ ಗೊತ್ತಾದಾಗ ಅವರು ತಮ್ಮ ನೇತಾರರಾದ ರುಸ್ತಂ ಮತ್ತು ಫೈರುಝಾನ್‌ರೊಡನೆ ಹೇಳಿದರು: ನಿಮ್ಮಿಬ್ಬರ ಭಿನ್ನತೆಯ ಕಾರಣದಿಂದ ಮುಸ್ಲಿಮರು ಇಷ್ಟೆಲ್ಲ ಶಕ್ತಿಯನ್ನು ಗಳಿಸಲು ಯಶಸ್ವಿಯಾದರು. ರುಸ್ತಂ ಮತ್ತು ಫೈರುಝಾನ್ ಬೂರಾನನ್ನು ವಜಾಗೊಳಿಸಿ 21 ವಯಸ್ಸಿನ ಯಝ್‌ದುಜರ್‌ದನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿದರು. ಇರಾನಿಯರ ಈ ತಯಾರಿಯ ಕುರಿತು ಹಝ್ರತ್ ಮುಸನ್ನ ಹಝ್ರತ್ ಉಮರ್‌ರಿಗೆ ತಿಳಿಸಿದರು. ಆಗ ಹಝ್ರತ್ ಉಮರ್(ರ) ನಾಲ್ಕೂ ಕಡೆಗಳಿಗೆ ದೂತರನ್ನು ಕಳುಹಿಸಿದರು ಮತ್ತು ಗೋತ್ರಗಳ ಮುಖಂಡರನ್ನು ಮಕ್ಕದಲ್ಲಿ ಒಟ್ಟುಸೇರಲು ನಿರ್ದೇಶಿಸಿದರು. ಆಗ ಹಜ್ಜ್ ಸಮಯವು ನಿಕಟವಾಗಿತ್ತು. ಹಝ್ರತ್ ಉಮರ್(ರ) ಹಜ್ಜ್ ಕರ್ಮಾನುಷ್ಠಾನಕ್ಕಾಗಿ ರವಾನೆಯಾದರು. ಹಝ್ರತ್ ಉಮರ್(ರ) ಹಜ್ಜಿನಿಂದ ಮರಳಿ ಬಂದಾಗ ಮದೀನದಲ್ಲಿ ಒಂದು ದೊಡ್ಡ ಸೈನ್ಯ ಒಟ್ಟುಗೊಂಡಿತ್ತು. ಮೊದಲಿಗೆ ಹಝ್ರತ್ ಉಮರ್(ರ) ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರನ್ನು ಮದೀನದ ಅಮೀರ್ ಆಗಿ ನಿಶ್ಚಯಿಸಿ ಸೈನ್ಯದ ನೇತೃತ್ವವನ್ನು ಸ್ವತಃ ತಾನೇ ವಹಿಸಿದರು. ತಾರೀಖ್ ತಬರಿಯಲ್ಲಿ ಬರೆಯಲಾಗಿರುವ ವಿವರಣೆ ಪ್ರಕಾರ, ಮೊದಲು ಹಝ್ರತ್ ಉಮರ್(ರ) ಈ ಸೈನ್ಯದ ನೇತೃತ್ವವನ್ನು ಸ್ವತಃ ವಹಿಸಲು ಉದ್ದೇಶಿಸಿದ್ದರು. ಆದರೆ ಅನಂತರ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್‌ರ ಸಲಹೆ ಪ್ರಕಾರ ನಾಲ್ಕು ಸಾವಿರ ಯೋಧರಿಗೆ ಹಝ್ರತ್ ಸಅದ್ ಬಿನ್ ಅಬೀ ವಖಾಸ್‌ರನ್ನು ಸೈನ್ಯದ ನೇತಾರರನ್ನಾಗಿ ನಿಶ್ಚಯಿಸಿದರು. ಹಝ್ರತ್ ಸಅದ್(ರ) ರವಾನೆಯಾಗುವುದಕ್ಕೆ ಮುಂಚೆ ಹಝ್ರತ್ ಉಮರ್(ರ) ಅವರಿಗೆ ನಿರ್ದೇಶನಗಳನ್ನು ಮತ್ತು ಉಪದೇಶಗಳನ್ನು ನೀಡಿದರು. ಮಾತ್ರವಲ್ಲ, ಖಾದಿಸಿಯ ತನಕ ತಲುಪುವ ರೀತಿ ಮತ್ತು ಯುದ್ಧ ಮೈದಾನದಲ್ಲಿ ವಿವೇಕಯುತವಾಗಿ ಹೋರಾಡುವುದರ ಕುರಿತು ಮುಖ್ಯ ಮತ್ತು ಮೂಲಭೂತ ಸಂಗತಿಗಳನ್ನು ಹೇಳಿಕೊಟ್ಟರು. ಹಝ್ರತ್

ಸಅದ್(ರ) ಶರಾಫ್ ತಲುಪಿ ಅಲ್ಲಿ ತಂಗಿದರು. ಅಲ್ಲಿ 8 ಸಾವಿರ ವ್ಯಕ್ತಿಗಳೊಂದಿಗೆ ಮುಸನ್ನ ಇದ್ದರು. ಈ ವೇಳೆ ಮುಸನ್ನ ನಿಧನರಾದರು. ಹಝ್ರತ್ ಉಮರ್(ರ) ಮುಗ್ಯೆರ ಬಿನ್ ಶುಅ್‌ಬರನ್ನು ಒಂದು ತುಕಡಿಯೊಂದಿಗೆ ರವಾನಿಸಿದರು ಮತ್ತು ಮುಗ್ಯೆರ ಬಿನ್ ಶುಅ್‌ಬರನ್ನು ತನ್ನ ನೇತೃತ್ವದ ಅಡಿಯಲ್ಲಿ ಇರಿಸಲು ಹಝ್ರತ್ ಸಅದ್‌ರಿಗೆ ಪತ್ರ ಬರೆದರು. ಹಝ್ರತ್ ಉಮರರ ಅನ್ವೇಷಣೆಯ ಮೇರೆಗೆ ಹಝ್ರತ್ ಸಅದ್(ರ) ತನ್ನ ಸೈನ್ಯದ ಸಿದ್ಧತೆ ಮತ್ತು ಸುತ್ತಲಿನ ಗಡಿಗಳ ಕುರಿತು ವಿಶದವಾಗಿ ಬರೆದು ಕಳುಹಿಸಿದರು. ಆಗ ಯಾವ ರೀತಿಯಲ್ಲಿ ಯುಕ್ತಿಯಿಂದ ಯುದ್ಧ ಮಾಡಬೇಕೆಂದು ಹಝ್ರತ್ ಉಮರ್(ರ) ಸಅದ್‌ರಿಗೆ ನಿರ್ದೇಶಿಸಿದರು.

ಹಝ್ರತ್ ಸಅದ್(ರ) ಖಲೀಫರ ನಿರ್ದೇಶನ ಪ್ರಕಾರ ಒಂದು ತಿಂಗಳು ಖಾದಿಸಿಯದಲ್ಲಿ ತಂಗಿದರು. ಇರಾನಿಯರ ಕಡೆಯಿಂದ ಹೋರಾಟಕ್ಕಾಗಿ ಯಾರೂ ಬರದೇ ಇದ್ದಾಗ ಆ ಪ್ರದೇಶದ ಜನರು ಯಝ್‌ದಜರ್ದ್‌ರಿಗೆ ಮುಸ್ಲಿಮರ ಇರುವಿಕೆಯ ಬಗ್ಗೆ ಬರೆದು ತಿಳಿಸಿದರು. ಆಗ ಯಝ್‌ದಜರ್ದ್ ರುಸ್ತಮ್‌ರನ್ನು ಕರೆದರು. ಆದರೆ ಅವನು ನೆಪಗಳನ್ನು ಮುಂದಿಟ್ಟುಕೊಂಡು ಯುದ್ಧದಲ್ಲಿ ಭಾಗವಹಿಸುವುದರಿಂದ ವಿಮುಖನಾದನು ಮತ್ತು ತನ್ನ ಸ್ಥಾನದಲ್ಲಿ ಜಾಲೀನೂಸ್‌ರನ್ನು ಸೈನ್ಯದ ಸೇನಾಧಿಪತಿಯನ್ನಾಗಿ ನಿಶ್ಚಯಿಸಲು ಸಲಹೆ ಕೊಟ್ಟನು. ಆದರೆ ಅರಸನ ಮುಂದೆ ರುಸ್ತಮಿನ ನೆಪಗಳು ಫಲಿಸಲಿಲ್ಲ ಮತ್ತು ಅವನಿಗೆ ಸೈನ್ಯದ ನೇತೃತ್ವ ವಹಿಸಬೇಕಾಗಿ ಬಂತು.

ರುಸ್ತಮಿಗೆ ಇಸ್ಲಾಮಿನ ಸಂದೇಶವನ್ನು ತಿಳಿಸಲು ವಿವೇಕಯುತ, ಬುದ್ಧಿವಂತ ಮತ್ತು ಧೈರ್ಯಶಾಲಿ ಜನರನ್ನು ಕಳುಹಿಸಬೇಕೆಂದು ಹಝ್ರತ್ ಸಅದ್(ರ)ರೊಡನೆ ಹಝ್ರತ್ ಉಮರ್(ರ) ಹೇಳಿದರು. ಹಝ್ರತ್ ಸಅದ್(ರ) 14 ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು ಪ್ರತಿನಿಧಿಗಳನ್ನಾಗಿಸಿ ಕಳುಹಿಸಿದರು. ಈ ಪ್ರತಿನಿಧಿಗಳು ಯಝ್‌ದಜರ್ದನ ಮುಂದೆ ಮೂರು ಸಂಗತಿಗಳನ್ನು ಇರಿಸಿದರು. ಒಂದು ಇಸ್ಲಾಂ ಧರ್ಮವನ್ನು ಸ್ವೀಕರಿಸು, ಎರಡು ಜಿಝ್ಯಿಯ ಪಾವತಿಸು ಮತ್ತು ಮೂರು ಯುದ್ಧಕ್ಕಾಗಿ ತಯಾರಾಗು. ಯಝ್‌ದಜರ್ದ್ ಹೇಳಿದನು: ದೂತರನ್ನು ಕೊಲ್ಲುವುದು ನಿಷಿದ್ಧವಲ್ಲದಿರುತ್ತಿದ್ದರೆ ನಾನು ನಿಮ್ಮೆಲ್ಲರನ್ನು ಕೊಲ್ಲುತ್ತಿದ್ದೆ. ಅನಂತರ ಅವನು ಮಣ್ಣು ತುಂಬಿದ ಒಂದು ಬುಟ್ಟಿಯನ್ನು ತರಿಸಿದನು ಮತ್ತು ನನ್ನ ಪರವಾಗಿ ಇದನ್ನು ತೆಗೆದುಕೋ ಎಂದು ಮುಸ್ಲಿಮರ ಸಂಘದ ಮುಖಂಡರೊಡನೆ ಹೇಳಿದನು.

ಖಾದಿಸಿಯ ಯುದ್ಧದ ಶೀರ್ಷಿಕೆಯಡಿಯಲ್ಲಿ ಈ ಘಟನೆಯನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಆ ಸಹಾಬಿ ಬಹಳ ಸಭ್ಯತೆಯಿಂದ ಮುಂದೆ ಹೋದರು ಮತ್ತು ತನ್ನ ತಲೆಯನ್ನು ಬಾಗಿಸಿ ಮಣ್ಣಿನ ಚೀಲವನ್ನು ಹೆಗಲ ಮೇಲೆ ಇರಿಸಿದರು. ಅನಂತರ ಆ ಸಹಾಬಿ ಒಂದು ಜಿಗಿತ ಹಾಕಿ ವೇಗವಾಗಿ ದರ್ಬಾರಿನಿಂದ ಹೊರಡುತ್ತಾ ತನ್ನ ಸಹಚರರೊಡನೆ ಉಚ್ಚ ಸ್ವರದಲ್ಲಿ ಹೇಳಿದರು: ಇಂದು ಇರಾನಿನ ಅರಸ ತನ್ನ ಕೈಯಿಂದಲೇ ತನ್ನ ದೇಶದ ಭೂಮಿಯನ್ನು ನಮಗೆ ಒಪ್ಪಿಸಿರುವರು. ಹೀಗೆ ಹೇಳಿಕೊಂಡು ಆ ಸಂಘ ಕುದುರೆಗಳಲ್ಲಿ ಸವಾರಿ ಮಾಡುತ್ತಾ ವೇಗವಾಗಿ ಅಲ್ಲಿಂದ ಹೊರಟರು. ಅರಸನು ಈ ಘೋಷವನ್ನು ಕೇಳಿದಾಗ ಅದನ್ನು ಅಪಶಕುನವೆಂದು ಭಾವಿಸಿ ನಡುಗಿದನು ಮತ್ತು ತನ್ನ ದರ್ಬಾರಿನವರೊಡನೆ ಮುಸ್ಲಿಮರನ್ನು ಹಿಂಬಾಲಿಸಲು ಹೇಳಿದರು. ಆದರೆ ಅಷ್ಟರಲ್ಲಿ ಮುಸ್ಲಿಮರಾದ ಕುದುರೆ ಸವಾರಿಗಳು ಬಹಳ ದೂರಕ್ಕೆ ಹೋಗಿ ಬಿಟ್ಟಿದ್ದರು.

ಈ ಘಟನೆಯ ನಂತರ ಅನೇಕ ತಿಂಗಳ ತನಕ ಮೌನತೆಯಿತ್ತು ಮತ್ತು ಯಝ್‌ದಜರ್ದನ ತಾಕೀತು ನಂತರವೂ ರುಸ್ತಂ ಯುದ್ಧದಿಂದ ದೂರವಿರುತ್ತಿದ್ದನು. ಕೊನೆಗೆ ರುಸ್ತಮಿಗೆ ಯಾವುದೇ ನಿರ್ವಾಹವಿಲ್ಲದೇ ಹೋರಾಟಕ್ಕಾಗಿ ಧಾವಿಸಬೇಕಾಯಿತು. ಅವನ ಸೈನ್ಯ ಖಾದಿಸಿಯದಲ್ಲಿ ಡೇರೆ ಹಾಕಿತು. ರುಸ್ತಮಿನ ಸೈನ್ಯದ ಸಂಖ್ಯೆ 1 ಲಕ್ಷ 30 ಸಾವಿರವಾಗಿತ್ತು. ಅವನೊಂದಿಗೆ 37 ಆನೆಗಳಿದ್ದುವು. ರುಸ್ತಮ್ ಇಸ್ಲಾಮಿನ ಸೈನ್ಯವನ್ನು ಪರಿಶೀಲಿಸಿ ಸಂಧಾನಕ್ಕಾಗಿ ಮುಸ್ಲಿಮರೊಡನೆ ಬೇಡಿಕೆಯಿಟ್ಟನು. ಮುಸ್ಲಿಮರ ಕಡೆಯಿಂದ ಮಾತುಕತೆ ನಡೆಸಲು ಅವನ ದರ್ಬಾರಿಗೆ ದೂತರು ಬರಬೇಕೆಂದು ಬೇಡಿಕೆ ಇರಿಸಿದನು. ಈ ಮಾತುಕತೆಯಲ್ಲೂ ಮುಸ್ಲಿಮರು ಅವೇ ಮೂರು ಸಂಗತಿಗಳನ್ನು ಮುಂದಿರಿಸಿದರು. ಎಂದರೆ, ಇಸ್ಲಾಂ ಸ್ವೀಕಾರ, ಜಿಝ್ಯಿಯ ಪಾವತಿ ಅಥವಾ ಯುದ್ಧ. ರುಸ್ತಂ ಮೂರೂ ಸಂಗತಿಗಳನ್ನು ಅಂಗೀಕರಿಸಲು ತಯಾರಾಗಲಿಲ್ಲ. ಕೊನೆಗೆ ಯುದ್ಧ ಮಾಡುವ ಉದ್ದೇಶವನ್ನು ವ್ಯಕ್ತಪಡಿಸಿದನು. ಮುಸ್ಲಿಮರು ತಮ್ಮ ಸೈನ್ಯವನ್ನು ಕ್ರಮಪಡಿಸುವ ಕಾರ್ಯವನ್ನು ಪೂರ್ತಿಗೊಳಿಸಿದಾಗ ಹಝ್ರತ್ ಸಅದ್‌ರ ದೇಹದಲ್ಲಿ ಕುರುವಾಯಿತು ಮತ್ತು ಅವರು ಸೊಂಟಬೇನೆಯ ತೊಂದರೆಯ ಕಾರಣದಿಂದ ತೀವ್ರ ರೋಗಗ್ರಸ್ತರಾದರು. ಹಝ್ರತ್ ಸಅದ್‌ರಿಗಾಗಿ ಮರದ ಮೇಲೆ ಒಂದು ಅಟ್ಟಣಿಗೆ ತಯಾರು ಮಾಡಲಾಯಿತು. ಅಲ್ಲಿಂದ ಅವರು ಮಲಗುತ್ತಲೇ ಸೈನ್ಯದ ಕಡೆ ನೋಡುತ್ತಿದ್ದರು. ಅವರು ತನ್ನ ಸ್ಥಾನದಲ್ಲಿ ಖಾಲಿದ್ ಬಿನ್ ಅರಫ್ತರನ್ನು ಪ್ರತಿನಿಧಿಯನ್ನಾಗಿ ಮಾಡಿದರು ಮತ್ತು ಮುಸ್ಲಿಮರನ್ನು ಸಂಬೋಧಿಸಿ ಯುದ್ಧ ಮಾಡಲು ಹುರಿದುಂಬಿಸಿದರು. ಇರಾನಿನ ಸೈನ್ಯದಲ್ಲಿ 30 ಸಾವಿರ ಸಿಪಾಯಿಗಳನ್ನು ಸಂಕೋಲೆಯಲ್ಲಿ ಬಿಗಿಯಲಾಗಿತ್ತು. ಯಾರೂ ಓಡಿ ಹೋಗದಿರಲಿಕ್ಕಾಗಿ ಹೀಗೆ ಮಾಡಲಾಗಿತ್ತು. ಹಝ್ರತ್ ಸಅದ್(ರ) ಮುಸ್ಲಿಮರೊಡನೆ ಸೂರಃ ಅನ್‌ಫಾಲ್ ಓದಲು ಆದೇಶಿಸಿದರು. ಅದರ ಪಾರಾಯಣದಿಂದ ಮುಸ್ಲಿಮರಿಗೆ ಮನಸ್ಸಮಾಧಾನವುಂಟಾಯಿತು. ಝುಹರ್ ನಮಾಝಿನ ನಂತರ ಯುದ್ಧ ಪ್ರಾರಂಭವಾಯಿತು. ಮೊದಲನೇ ದಿನ ಬನೂ ಅಸದ್ ಗೋತ್ರದ ಐನೂರು ಮುಸ್ಲಿಮರು ಹುತಾತ್ಮರಾದರು. ಎರಡನೇ ದಿವಸ ಹಝ್ರತ್ ಹಾಶಿಂ ಬಿನ್ ಉತ್‌ಬ ಅಬೀ ವಖಾಸ್‌ರ ನೇತೃತ್ವದಲ್ಲಿ ಸಹಾಯ ಲಭಿಸಿತು. ಅದರ ಮುಂಭಾಗದಲ್ಲಿ ಹಝ್ರತ್ ಖಅ್‌ಖಾಅ್ ಬಿನ್ ಅಮ್ರ್ ಅಮೀರ್ ಆಗಿದ್ದರು. ಹಝ್ರತ್ ಖಅ್‌ಖಾಅ್ ಯುದ್ಧಕ್ಕಾಗಿ ಆಹ್ವಾನಿಸಿದಾಗ ಬಹ್ಮನ್ ಜಾಝುವಿಯ ಹೋರಾಟಕ್ಕಾಗಿ ಮುಂದೆ ಬಂದನು. ಇಬ್ಬರೂ ಮುಖಾಮುಖಿಯಾದರು. ಹಝ್ರತ್ ಖಅ್‌ಖಾಅ್ ಬಹ್ಮನ್ ಜಾಝುವಿಯನನ್ನು ಕೊಂದು ಹಾಕಿದರು. ಬಹ್ಮನ್ ಜಾಝುವಿಯ ಸಾವು ಮತ್ತು ಮುಸ್ಲಿಮರ ಸಹಾಯಕ ಸೈನ್ಯದ ಕಾರಣದಿಂದ

ಮುಸ್ಲಿಮರು ಸಂತೋಷಗೊಂಡಿದ್ದರು. ಮೂರನೇ ದಿನ ರಕ್ತಪಾತದ ಯುದ್ಧ ನಡೆಯಿತು. ಅದರಲ್ಲಿ 2 ಸಾವಿರ ಮುಸ್ಲಿಮರು ಮತ್ತು 10 ಸಾವಿರ ಇರಾನಿಯರು ಕೊಲ್ಲಲ್ಪಟ್ಟರು. ಹಝ್ರತ್ ಸಅದ್‌ರ ನಿರ್ದೇಶನ ಪ್ರಕಾರ ಹಝ್ರತ್ ಖಅ್‌ಖಾಅ್ ಮತ್ತು ಹಝ್ರತ್ ಆಸಿಂ ಇರಾನಿಯರ ಬಿಳಿ ಆನೆಯನ್ನು ಕೊಂದು ಹಾಕಿದರು. ಇತರ ಮುಸ್ಲಿಮರು ಅಜ್ರಬ್ ಎಂಬ ಹೆಸರಿನ ಇನ್ನೊಂದು ಆನೆಯನ್ನು ಎಷ್ಟು ಮದೋನ್ಮತ್ತಗೊಳಿಸಿದರು ಎಂದರೆ ಅದು ನದಿಗೆ ಧುಮಿಕಿತು. ಅದನ್ನು ನೋಡಿಕೊಂಡು ಇತರ ಆನೆಗಳು ಸಹ ನದಿಗೆ ಜಿಗಿದುವು.

ಆ ದಿನ ಇಶಾ ನಮಾಝಿನ ನಂತರ ಘನಘೋರ ಯುದ್ಧ ನಡೆಯಿತು. ಅಂದು ರಾತ್ರಿ ನಡೆದಂತಹ ಯುದ್ಧ ಅರೇಬಿಯರು ಮತ್ತು ಅರೇಬಿಯೇತರರು ಎಂದಿಗೂ ನೋಡಿರಲಿಲ್ಲ. ರಾತ್ರಿ ಪೂರ್ತಿ ಹಝ್ರತ್ ಸಅದ್(ರ) ಅಲ್ಲಾಹನ ಸನ್ನಿಧಿಯಲ್ಲಿ ದುಆದಲ್ಲಿ ನಿರತರಾಗಿದ್ದರು. ಬೆಳಿಗ್ಗೆಯಾದಾಗಲೂ ಮುಸ್ಲಿಮರ ಆವೇಶ ಹಾಗೆಯೇ ಇತ್ತು ಮತ್ತು ಅವರು ಮೇಲುಗೈ ಸಾಧಿಸಿದ್ದರು. ನಾಲ್ಕನೇ ದಿನ ಮಧ್ಯಾಹ್ನ ತನಕ ಯುದ್ಧ ಜಾರಿಯಲ್ಲಿತ್ತು. ಇರಾನಿಯರು ಹಿಂದಕ್ಕೆ ಸರಿಯುತ್ತಿದ್ದರು. ಅಂದು ರುಸ್ತಮಿನ ಮೇಲೆ ತೀವ್ರ ಹಲ್ಲೆ ನಡೆಸಲಾಯಿತು. ಅವನು ನದಿಗೆ ಧುಮುಕಿದನು. ಹಿಲಾಲ್ ಎಂಬ ಹೆಸರಿನ ಒಬ್ಬ ಮುಸ್ಲಿಮ್ ಅವನನ್ನು ಹಿಡಿದು ದಡಕ್ಕೆ ತಂದು ಅವನನ್ನು ಕೊಂದುಹಾಕಿದರು. ರುಸ್ತಮಿನ ಕೊಲೆಯ ಸುದ್ದಿ ಕೇಳಿ ಇರಾನಿಯರು ಸೋತು ಓಡಿ ಹೋದರು. ಮುಸ್ಲಿಮರು ಅವರನ್ನು ಹಿಂಬಾಲಿಸಿದರು ಮತ್ತು ಅನೇಕರನ್ನು ಬಂಧಿಸಿದರು.

ಹಝ್ರತ್ ಉಮರ್(ರ) ದಿನಾಲೂ ಬೆಳಿಗ್ಗೆಯಾಗುತ್ತಲೇ ಮೈದಾನದಿಂದ ಹೊರಗೆ ಬರುವ ಸವಾರರೊಡನೆ ಖಾದಿಸಿಯ ಯುದ್ಧದ ಕುರಿತು ಕೇಳುತ್ತಿದ್ದರು. ವಿಜಯದ ಸುವಾರ್ತೆ ತರುತ್ತಿದ್ದ ದೂತ ಮದೀನ ಪ್ರವೇಶಿಸುತ್ತಿದ್ದಾಗ ಹಝ್ರತ್ ಉಮರ್(ರ) ಓಡುತ್ತಾ ಮಾಹಿತಿಗಳನ್ನು ಕೇಳುತ್ತಿದ್ದರು. ಆ ವೇಳೆ ದೂತ ತನ್ನ ಒಂಟೆಯಲ್ಲಿ ಸವಾರರಾಗಿದ್ದರು. ದೂತ ಮದೀನದಲ್ಲಿ ಪ್ರವೇಶಿಸುತ್ತಿದ್ದಾಗ ಮತ್ತು ಹಝ್ರತ್ ಉಮರ್(ರ)ರನ್ನು ಜನರು ಅಮೀರುಲ್ ಮೂಅ್‌ಮಿನೀನ್ ಎಂದು ಕರೆದು ಸಲಾಂ ಹೇಳುತ್ತಿದ್ದಾಗ, ದೂತನು ಹಝ್ರತ್ ಉಮರ್‌ರೊಡನೆ ಕೇಳಿದರು: ತಾವು ಅಮೀರುಲ್ ಮೂಅ್‌ಮಿನೀನ್ ಆಗಿದ್ದೀರಿ ಎಂದು ನನ್ನೊಡನೆ ಏಕೆ ಹೇಳಲಿಲ್ಲ. "ಹೇ ನನ್ನ ಸಹೋದರ, ಪರವಾಗಿಲ್ಲ" ಎಂದು ಹಝ್ರತ್ ಉಮರ್(ರ) ಹೇಳಿದರು. ಹಝ್ರತ್ ಉಮರ್(ರ)ರಿಗೆ ವಿಜಯದ ಸುದ್ದಿ ಲಭಿಸಿದಾಗ ಮದೀನದಲ್ಲಿ ಅವರು ಮುಸ್ಲಿಮರನ್ನು ಸಂಬೋಧಿಸಿ ಪ್ರಭಾವಶಾಲಿ ಭಾಷಣ ಮಾಡಿದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಬರೆಯುತ್ತಾರೆ: ಮುಸ್ಲಿಮರಲ್ಲಿ ಈ ಮಹತ್ತಾದ ಪರಿವರ್ತನೆ ಉಂಟಾಗಲು ಕಾರಣವೇನೆಂದರೆ, ಪವಿತ್ರ ಖುರ್‌ಆನಿನ ಅಧ್ಯಾಪನೆ ಅವರ ನೈತಿಕತೆ ಮತ್ತು ಅವರ ಸ್ವಭಾವದಲ್ಲಿ ಒಂದು ಬದಲಾವಣೆಯನ್ನು ಉಂಟುಮಾಡಿತ್ತು. ಅವರ ತಾಮಸ ಜೀವಿತಕ್ಕೆ ಅದು ಒಂದು ಮೃತ್ಯುವನ್ನು ಬರಿಸಿತ್ತು. ಅವರನ್ನು ಅದು ಶ್ರೇಷ್ಠ ನಡತೆ ಮತ್ತು ಉನ್ನತ ಸ್ವಭಾವದ ಮಟ್ಟದಲ್ಲಿ ತಂದು ನಿಲ್ಲಿಸಿತ್ತು. ಅದರ ಕಾರಣದಿಂದ ಈ ಪರಿವರ್ತನೆ ಉಂಟಾಯಿತು. ಒಟ್ಟಿನಲ್ಲಿ ಪವಿತ್ರ ಖುರ್‌ಆನಿನ ಪಾಠಗಳ ಪ್ರಕಾರ ನಡೆಯುವುದರಿಂದಲೇ ನೈಜ ಪರಿವರ್ತನೆ ಉಂಟಾಗುತ್ತವೆ.

(ಈ ಪ್ರಸ್ತಾಪ ಮುಂದುವರೆಯುವುದು ಎಂದು ಹಝ್ರತ್ ಖಲೀಫತುಲ್ ಮಸೀಹರು ಖುತ್‌ಬದ ಕೊನೆಯಲ್ಲಿ ಹೇಳಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ۔

***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 23-07-2021*

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim |***Layout:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon